ಜೆಎಸ್‌ಎಸ್ ಮಹಾವಿದ್ಯಾಪೀಠ

**ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು**

ESTD-1964

* ಪ್ರಚ್ಛನ್ನ ಉತ್ಕೃಷ್ಠತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ

(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)

**ಊಟಿ ರಸ್ತೆ, ಮೈಸೂರು - 570 025**

☎: 0821-2548236 & 2548380 Fax: 0821-2548238 E-mail: jssautonomous@gmail.com www.jsscacs.edu.in

ದಿನಾಂಕ :

# ಬುದ್ಧ ಅಧ್ಯಯನ ಕೇಂದ್ರ

(ಯುಜಿಸಿ ಪ್ರಾಯೋಜಿತ)

**ಪ್ರಕಟಣೆಯ ಕೃಪೆಗಾಗಿ**

ನಮ್ಮ ಕಾಲೇಜಿನಲ್ಲಿರುವ ಬುದ್ಧ ಅಧ್ಯಯನ ಕೇಂದ್ರದ ವತಿಯಿಂದ 'ಕನ್ನಡ ಸಾಹಿತ್ಯದಲ್ಲಿ ಬುದ್ಧ' ಎಂಬ ವಿಚಾರ ಸಂಕಿರಣವನ್ನು ದಿನಾಂಕ :೨೮.೦೩.೨೦೧೩ರ ಗುರುವಾರದಂದು ಆಯೋಜಿಸಲಾಗಿತ್ತು.

ವಿಚಾರ ಸಂಕಿರಣದ ಉದ್ಘಾಟನೆಯನ್ನು ನಿವೃತ್ತ ಸಂಸ್ಕೃತ ಪ್ರಾಧ್ಯಾಪಕರಾದ ಪ್ರೊ. ಎಚ್. ವಿ. ನಾಗರಾಜರಾವ್ ಅವರು ನೆರವೇರಿಸಿದರು. ಇವರು ತಮ್ಮ ಉದ್ಘಾಟನಾ ಭಾಷಣದಲ್ಲಿ 'ಭಾರತದ ನಾನಾ ಪ್ರಕಾರದ ಸಾಹಿತ್ಯ ಪರಂಪರೆ ಪ್ರಾರಂಭವಾಗುವುದು ಬೌದ್ಧಸಾಹಿತ್ಯದಿಂದಲೆ. ಮಹಾಕಾವ್ಯ, ನಾಟಕ, ಕಥಾ ಸಾಹಿತ್ಯಕ್ಕೆ ಬುದ್ಧನನ್ನು ಕುರಿತು ರಚಿತವಾದ ಸಾಹಿತ್ಯ ಕೃತಿಗಳೇ ಮೂಲವಾಗಿವೆ. ವೈಜ್ಞಾನಿಕ ದೃಷ್ಟಿಕೋನದಿಂದ ನೋಡಿದರೆ ಅತ್ಯರಿತ ವಾಸ್ತವ ತತ್ವಗಳನ್ನು ಬುದ್ಧ ಪ್ರತಿಪಾದಿಸಿದ್ದಾನೆ. ಈ ನೆಲದ ಸಾಮಾನ್ಯ ಜನರ ಬದುಕಿನ ನಿಜದನಿ ಅದರಲ್ಲಿ ಅಡಕವಾಗಿದೆ. ಇಂದು ಬೌದ್ಧ ಧರ್ಮ ತಾನು ಹುಟ್ಟಿದ ದೇಶಕ್ಕಿಂತ ಬೇರೆ ದೇಶಗಳಲ್ಲಿ ಹೆಚ್ಚು ಚಾಲ್ತಿಯಲ್ಲಿದೆ. ಆದರೆ ಅಲ್ಲಿ ಬೌದ್ಧಧರ್ಮದ ತತ್ವಗಳ ಅನುಷ್ಠಾನ ಅಷ್ಟಾಗಿ ನಡೆಯದಿರುವುದು ವಿಷಾದನೀಯ. ಹಿಂಸೆ, ದೌರ್ಜನ್ಯ, ಜನಾಂಗೀಯ ಕಲಹಗಳು ಅಲ್ಲಿ ಹೆಚ್ಚಾಗಿವೆ. ಆ ಹಿನ್ನೆಲೆಯಲ್ಲಿ ಅವುಗಳು ನಿಜ ಅರ್ಥದಲ್ಲಿ ಬುದ್ಧನ ಮಾರ್ಗದಲ್ಲಿ ಸಾಗಿದರೆ ಅದು ಅವರು ಬೌದ್ಧ ಧರ್ಮಕ್ಕೆ ಸಲ್ಲಿಸುವ ನಿಜವಾದ ಕೊಡುಗೆಯಾಗುತ್ತದೆ. ನಾವೂ ಕೂಡ ಬೌದ್ಧ ಧರ್ಮದ ತತ್ವಗಳನ್ನು, ಬುದ್ಧನ ವಿಚಾರ ಧಾರೆಗಳನ್ನು ಅಳವಡಿಸಿಕೊಂಡಾಗ ನೆಮ್ಮದಿಯ ಜಗವನ್ನು ನಿರ್ಮಿಸಲು ಸಾಧ್ಯ. ಆ ದಿಕ್ಕಿನಲ್ಲಿ ಎಲ್ಲರೂ ಸಾಗೋಣ' ಎಂದು ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮಾನಸ ಗಂಗೋತ್ರಿಯ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗದ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಎಂ. ಎಸ್. ಕೃಷ್ಣಮೂರ್ತಿಅವರು ಮಾತನಾಡುತ್ತಾ ಜಗತ್ತಿನ ನಾನಾ ದೇಶಗಳಲ್ಲಿ ಬೌದ್ಧಧರ್ಮ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ. ನಮ್ಮ ದೇಶದಲ್ಲಿಯೂ ಇತ್ತೀಚೆಗೆ ಬುದ್ಧನ ಕುರಿತ ಅಧ್ಯಯನ ಮತ್ತು ಆಲೋಚನೆಗಳು ಹೆಚ್ಚು ನಡೆಯುತ್ತಿರುವುದು ಆರೋಗ್ಯಕರ ಬೆಳವಣಿಗೆ. ಬುದ್ಧನ ಅಸ್ತಿತ್ವವೆ ಈ ನೆಲದಲ್ಲಿ ಇರಲಿಲ್ಲ ಎನ್ನುವಷ್ಟರ ಮಟ್ಟಿಗೆ ಆತನ ಕುರುಹುಗಳು ಅಳಿಸಿಹೋಗಿದ್ದವು. ಆದರೆ ಅವುಗಳನ್ನು ಹುಡುಕಿ ತೆಗೆಯುವ ಪ್ರಯತ್ನ ನಡೆದಾಗ ಈ ನೆಲದಲ್ಲಿ ಅತ್ಯಂತ ಪ್ರಭಾವಿ ಧರ್ಮವಾಗಿ ಬೌದ್ಧಧರ್ಮ ಮೆರೆದಿರುವುದನ್ನು ಕಾಣಬಹುದು. ಒಂದು ಕಾಲದಲ್ಲಿ ಬೌದ್ಧಧರ್ಮ ಭಾರತದ ಮುಖ್ಯ ಧರ್ಮವಾಗಿತ್ತು. ಆತನ ತತ್ವಗಳನ್ನು ಜನರು ಅನುಸರಿಸುತ್ತಿದ್ದರು. ಈ ನೆಲದಲ್ಲಿ ಅದು ಪ್ರಬಲವಾಗಿಯೇ ನೆಲೆಯೂರಿತ್ತು ಎಂಬುದಕ್ಕೆ ಸಾಕಷ್ಟು ಆಧಾರಗಳು ನಮಗೆ ದೊರೆಯುತ್ತವೆ. ಇತ್ತೀಚೆಗೆ ಬುದ್ಧ ಮತ್ತು ಆತನ ತತ್ವಗಳ ಕುರಿತ ಚಿಂತನೆ, ಸಾಹಿತ್ಯ ಕೃತಿಗಳು ಹೆಚ್ಚು ಹೆಚ್ಚು ಬರುತ್ತಿವೆ. ಹೊಸ ಹೊಸ ಆಲೋಚನೆಯಲ್ಲಿ ಜನತೆ ಅದನ್ನು ಸ್ವೀಕರಿಸುತ್ತಿದ್ದಾರೆ. ನಮ್ಮನ್ನು ನಾವು ಹುಡುಕುವ ಪ್ರಯತ್ನ ಸಾಗಿರುವುದು ಒಳ್ಳೆಯ ಬೆಳವಣಿಗೆ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಚಿತ್ರಪ್ರದರ್ಶನದ ಮೂಲಕ ಭಾರತದಲ್ಲಿ ಬೌದ್ಧಧರ್ಮದ ಕುರುಹುಗಳ ಬಗ್ಗೆ ಮಾಹಿತಿ ನೀಡಿದರು.

ಪ್ರಾಂಶುಪಾಲರಾದ ಪ್ರೊ. ಬಿ. ವಿ. ಸಾಂಬಶಿವಯ್ಯ ಅವರು ಸ್ವಾಗತ ಕೋರಿದರು. ಬುದ್ಧ ಅಧ್ಯಯನ ಕೇಂದ್ರದ ಸಂಯೋಜನಾಧಿಕಾರಿಗಳಾದ ಡಾ. ಬಿ. ಪ್ರಭುಸ್ವಾಮಿಯವರು ವಂದನಾರ್ಪಣೆ ಸಲ್ಲಿಸಿದರು. ವಿದ್ಯಾರ್ಥಿ ಎಚ್. ಎಂ. ಮಲ್ಲಿಕಾರ್ಜುನ ಅವರು ಪ್ರಾರ್ಥನೆ ಸಲ್ಲಿಸಿದರು. ಸಹಾಯಕ ಪ್ರಾಧ್ಯಾಪಕರಾದ ಡಾ. ಬಿ. ಎಸ್ ಸುದೀಪ್ ಅವರು ನಿರೂಪಿಸಿದರು.



ನಂತರ ನಡೆದ ಗೋಷ್ಠಿಗಳಲ್ಲಿ ಬುದ್ಧನ ಕುರಿತ ಕಾವ್ಯಗಳ ಬಗ್ಗೆ ಡಿ. ಬನುಮಯ್ಯ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಪ್ರೊ. ಎಸ್. ಶಿವಾಜಿ ಜೋಯಿಸ್ ಅವರು, ಬುದ್ಧನ ಕುರಿತ ಕಥಾಸಾಹಿತ್ಯದ ಬಗ್ಗೆ ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕರಾದ ಡಾ. ಬಿ.ನಂ. ಚಂದ್ರಯ್ಯ ಅವರು, ಬುದ್ಧನ ಕುರಿತ ನಾಟಕಗಳ ಬಗ್ಗೆ ಕರ್ನಾಟಕ ನಾಟಕ ಅಕಾಡೆಮಿಯ ನಿಕಟಪೂರ್ವ ಸದಸ್ಯರಾದ ಶ್ರೀ ನಾ. ನಾಗಚಂದ್ರ ಅವರು, ಬುದ್ಧನ ಕುರಿತ ಕವಿತೆಗಳ ಬಗ್ಗೆ ಜೆಎಸ್ಎಸ್ ಕಾಲೇಜಿನ ಕನ್ನಡ ಸ್ನಾತಕೋತ್ತರ ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರಾದ ಡಾ. ಎಚ್. ಟಿ. ಶೈಲಜ ಅವರು ಉಪನ್ಯಾಸ ನೀಡಿದರು.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ

ಪ್ರಾಂಶುಪಾಲರು

ಪ್ರಾಚಾರ್ಯರು,
ಜೆ.ಎಸ್.ಎಸ್. ಕಾಲೇಜು,
ಊಟಿ ರಸ್ತೆ, ಮೈಸೂರು-25

ಗೆ,
ಸಂಪಾದಕರು

____________________

____________________

____________________